ನಾನು ಬೇಕಾದಷ್ಟು ಸಾರಿ ಕೇಳಿದ್ದೇನೆ. ನಮ್ಮ ತಾಲ್ಲೂಕು ಬಹಳ ಕಷ್ಟನಷ್ಟದಲ್ಲಿದೆ ಎಂಬುದನು ಅವರು ಗಮನಕ್ಕೆ ತೆಗೆದುಕೊಳ್ಳಬೇಕು. ಆಲಂದ್ ಮಾರ್ಗವಾಗಿ ಔರಂಗಾಬಾದ್‌ಗೆ ಬಸ್‌ಗಳು ಬರುತ್ತವೆ ಔರಂಗಾಬಾದ್ ಮತ್ತು ಕಣಗುಟ್ಟು ಇಲ್ಲಿ ಕೂಡ ಬಸ್ ಸಂಚಾರ ಸಾಕಷ್ಟು ಇದೆ. ಆದ್ದರಿಂದ ಈ ಭಾಗಕ್ಕೆ ಸರ್ಕಾರದವರು ನ್ಯಾಷನಲ್ ಹೈವೇ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ರೆಕ್‌ಮೆಂಡ್ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಈಗತಾನೇ ಮಾನ್ಯ ಸದಸ್ಯರು ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಅವರ ಆಶಯವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಈ ಅಧಿವೇಶನ ಮುಗಿದ ನಂತರ ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತೇನೆ. ಮಾನ್ಯ ಸದಸ್ಯರು ವಿಶೇಷ ರೀತಿಯಲ್ಲಿ ಆ ಭಾಗಕ್ಕೆ ಸೌಲಭ್ಯಗಳನ್ನು ಮಾಡಿಕೊಡಬೇಕು, ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಅಣ್ಣಾರಾವ್ ಪಾಟೀಲ್.—ಸ್ವಾಮಿ, ಅಲ್ಲಿ ಪಾಪ್ಯುಲೇಷನ್ ಹೆಚ್ಚಾಗುತ್ತದೆ, ಅಲ್ಲಿ ಸರಿಯಾದ ಸ್ಕೂಲ್‌ಗಳು ಇಲ್ಲ, ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳು ಇಲ್ಲ, ಇಂಡಸ್ಟ್ರೀಸ್ ಇಲ್ಲ. ಇದನ್ನೂ ಅವರು ಗಮನಕ್ಕೆ ತೆಗೆದುಕೊಳ್ಳಬೇಕು.

MR. DEPUTY SPEAKER.—He has promised. He is coming to your constituency.

Accommodation for Bus Stand at Puttur, Dakshina Kannada District

414 SRI K. RAMBHAT (Puttur).—Will the Minister for Transport and Minor Irrigation be pleased to state :—

(a) number of years passed after taking over the Bus Stand at Puttur in South Kanara District by the K.S.R.T.C. ;

(b) whether it has come to the notice of the Government that the inconvenience caused to the vehicles due to paucity of parking place in the existing Bus stand;

(c) whether is there any proposal before the Government to shift the existing building and for constructing of New Building and extending the Bus stand;

(d) if so, when it will be provided ?

SRI M. M. J. SADYOJATHA (Minister for Transport and Minor Irrigation).—

(a) K.S.R.T.C. took over the possession of the Bus Stand at Puttur on 22-2-1979.

(b) Yes.

(c) K.S.R.T.C. is contemplating to construct the bus stand on the site belonging to the Road Transport Corporation.

(d) The construction work of the Bus stand will be taken up after the improvement of financial position of the Road Transport Corporation.

ಶ್ರೀ ಕೆ. ರಾಮಭಟ್.—ಸ್ವಾಮಿ ಪುತ್ತೂರು ನಗರದ ಬಸ್ ನಿಲ್ದಾಣವನ್ನು ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ವಶಕ್ಕೆ ತೆಗೆದುಕೊಂಡು ಎರಡು ವರ್ಷವಾಯಿತು. ಈಗ್ಗೆ ಎರಡು ವರ್ಷಗಳ ಮೊದಲೇ ಈ ಬಸ್ ಸ್ಟಾಂಡನ್ನು ವಿಸ್ತಾರಣೆ ಮಾಡುತ್ತೇವೆಂದು ಸಂಬಂಧ ಪಟ್ಟ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೆ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಈ ಶತಮಾನದ ಅಂತ್ಯದವರೆವಿಗೂ ಈ ಬಸ್ ಸ್ಟಾಂಡ್ ವಿಸ್ತರಣೆ ಆಗುವ ಸೂಚನೆ ಕಾಣುವುದಿಲ್ಲ. ಇದಕ್ಕೆ ಪ್ಲಾನು ಏಸ್ಟಿಮೇಟು ಏನಾದರೂ ತಯಾರು ಮಾಡಿದ್ದೀರಾ ?

† ಶ್ರೀ ಎಂ. ಎಂ. ಜೆ. ಸದ್ಯೋಜಾತ.—೬ ಲಕ್ಷ ರೂಪಾಯಿಗಳ ಯೋಜನೆಯಲ್ಲಿ ಈ ಬಸ್ ನಿಲ್ದಾಣದ ನಿರ್ಮಾಣವನ್ನು ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಕೆ. ರಾಮಭಟ್.—ಸ್ವಾಮಿ ಈಗ ಆಗಿರತಕ್ಕ ಬಸ್ ಸ್ಟಾಂಡಿನಲ್ಲಿ ಕುಳಿತು ಕೊಳ್ಳುವುದಕ್ಕೆ ಜಾಗವಿಲ್ಲ. ಬೆಂಚುಗಳಿಲ್ಲ, ಅಲ್ಲಿನ್ಸ್ಟಿ ಬಸ್ ಸ್ಟಾಂಡಿನಲ್ಲಿ ಹಳ್ಳಗಳಿವೆ. ಜನಗಳಿಗೆ ತುಂಬಾ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಶ್ರೀ ಎಂ ಎಂ ಜೆ. ಸದ್ಯೋಜಾತ.—ಅದಕ್ಕಾಗಿಯೇ ಹೊಸ ಬಸ್ ನಿಲ್ದಾಣವನ್ನು ಕಟ್ಟುವುದಕ್ಕೆ ಕ್ರಮ ಕೈಗೊಳ್ಳುತ್ತೇವೆಂದು ಈಗಾಗಲೇ ನಾನು ಹೇಳಿದ್ದೇನೆ.

ಶ್ರೀ ಕೆ ರಾಮಭಟ್.—ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ರಸ್ತೆ ಸಾರಿಗೆ ಸಂಸ್ಥೆಯ ಹಣಕಾಸು ಪರಿಸ್ಥಿತಿ ಉತ್ತಮಗೊಂಡನಂತರ ಬಸ್ ನಿಲ್ದಾಣ ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗವುದೆಂದು ಹೇಳಿದ್ದೀರಿ ಯಾವಾಗ ಕೈಗೊಳ್ಳುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದೇ ವರ್ಷವೇ ಪ್ರಾರಂಭ ಮಾಡುತ್ತೇವೆ.

Population of Gondali Community in the State

481. SRI R. S. NADONI (Raibag).—Will the Chief Minister be pleased to state:—

(a) the population of Gondali Community (including Budubudake and Joshi) in Karnataka State ;

(b) is there any representatives belonging to these communities in our State Legislature. If not, the action taken by the Government to bring up these communities in the political field ;

(c) is there any one holding highest Government post in the State services belonging to Gondali community ? If so, what is their No. and particulars of their appointment ;

(d) in case, if there are no officers belonging to this community, what are the actions taken by the Government to give proper representation to them in the services of the State?

SRI R. GUNDU RAO (Chief Minister).—

(a) Particulars about the population of Gondali caste (including Budabudake and Joshi) are not available.

(b) Since the legislators list is not prepared on the basis of the caste, the required information is not available. For political advancement of a particular community, specific action has not been taken.